ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | | | | |
|---|---|---|---|---|
| | ಸಿಸಿ ನಂ. 168/2020 | | | |
| | ಸಿ.ಡಬ್ಲೂ: | 5 | ಪಿ.ಡಬ್ಲೂ: | 3 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 24.10.2024 | | | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

1. ಈಗ ನನಗೆ ತೋರಿಸಿದ ಮು.ಮಾ.ಗಳನ್ನು ಪೋಲಿಸರು ಘಟನಾ ಸ್ಥಳದಿಂದ ವಶಪಡಿಸಿಕೊಂಡಿದ್ದು ಇರುತ್ತದೆ.

**ಪಾಟೀ ಸವಾಲುಃ ಶ್ರೀ ಜಿ.ಜಿ.ಐ. ರವರಿಂದಃ**

1. ಸದರಿ ಪ್ರಕರಣ ದಾಖಲಿಸುವ ಮುಂಚೆ ನಾನು ಆರೋಪಿತರ ವಿರುದ್ಧ ಸಿವಿಲ್ ವ್ಯಾಜ್ಯ ಸಂಖ್ಯೆ 74/2022 ಅಂತಾ ದಾಖಲು ಮಾಡಿದ್ದೆನು ಎಂದರೆ ಸರಿ. ಸದರಿ ಪ್ರಕರಣ ಇನ್ನೂ ಚಾಲ್ತಿಯಲ್ಲಿದೆ ಎಂದರೆ ಸರಿ. ಆಸ್ತಿ ಕುರಿತು ನನ್ನ ತಂದೆ ಚಾಸಾ 1 ಮತ್ತು ಆರೋಪಿತರ ನಡುವೆ ವ್ಯಾಜ್ಯ ಇತ್ತು ಎಂದರೆ ಸರಿ.

2. ಘಟನಾ ಸ್ಥಳದಲ್ಲಿ ರಾತ್ರಿ ನನ್ನ ತಂದೆ ಚಾಸಾ 1 ರವರು ದಾರಿ ಮಾಡಲು ಜೆ ಸಿ ಬಿ ಯಿಂದ ಕೆಲಸ ಮಾಡುತ್ತಿದ್ದಾಗ ಜಗಳ ಆಯಿತೆಂದು ನಮಗೆ ತಿಳಿದಿದ್ದು , ಆಗ ನಾನು, ಚಾಸಾ 4, 6 ಹೋಗಿದ್ದೆವು. ನಾವು ಹೋಗುವ ಪೂರ್ವದಲ್ಲಿ ಸುಮಾರು ಅರ್ಧ ಗಂಟೆ ಜಗಳ ಆಗಿತ್ತು. ಜಗಳ ಆಗುತ್ತಿರುವುದರ ಶಬ್ದ ಕೇಳಿ ನಾನು ಘಟನಾ ಸ್ಥಳಕ್ಕೆ ಹೋಗಿದ್ದೆ. ಆಗ ಆರೋಪಿತರು ಮತ್ತು ಇನ್ನಿಬ್ಬರು ಇದ್ದರು. ರಾತ್ರಿ ಕತ್ತಲೆ ಇದುದ್ದರಿಂದ, ಅವರ ಚಹರೆಯನ್ನು ನಾನು ನೋಡಿಲ್ಲ. ನಾವು ಹೋಗುವಷ್ಟರಲ್ಲಿ ನನ್ನ ತಂದೆಯ ತಲೆಗೆ ಪೆಟ್ಟಾಗಿತ್ತು ಎಂದರೆ ಸರಿ. ನನ್ನ ತಂದೆಗೆ ಘಟನೆ ನಡೆದಾಗ, ಯಾರ ಸಹಾಯವಿಲ್ಲದೇ ನಡೆಯಲು ಬರುತ್ತಿರಲಿಲ್ಲ ಎಂದರೆ ಸರಿ ಅಲ್ಲ.

3. ನಾವು ಘಟನಾ ಸ್ಥಳ ತಲುಪಿದಾಗ ರಾತ್ರಿ 11.00 ಗಂಟೆಯಾಗಿತ್ತು. ಸದರಿ ಕಾಲಕ್ಕೆ ಆರೋಪಿತರು ಚಾಸಾ 1 ರವರಿಗೆ ಕಲ್ಲಿನಿಂದ ಮತ್ತು ಕೊಡಲಿಯಿಂದ ತಲೆಗೆ ಹೊಡೆದಿದ್ದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

4. ನನ್ನ ತಂದೆಗೆ ಗಾಯವಾದಾಗ, ನಾನು ಮತ್ತು ಆರೋಪಿತರು ಸ್ಥಳದಲ್ಲಿದ್ದೆವು. ಘಟನೆ ನಡೆದಾಗ, ಕತ್ತಲಿದುದ್ದರಿಂದ, ಚಾಸಾ 1 ರವರಿಗೆ ರಕ್ತಗಾಯ ಯಾವ ರೀತಿಯಾಗಿ ಆಗಿತ್ತು ಅಂತಾ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ನನ್ನ ತಂದೆ ಹೇಳಿದ್ದರು ಅಂತಾ ನುಡಿಯುತ್ತಾರೆ. ನನ್ನ ಮಗ ಪ್ರವೀಣ ಇವರು ಆಂಬ್ಯುಲೆನ್ಸಗೆ ಕರೆ ಮಾಡಿದ್ದು , ಅವರು 12.00 ಗಂಟೆಗೆ ಬಂದಿದ್ದರು. ಸದರಿ ವಾಹನದಲ್ಲಿ

ಚಾಸಾ 4 ಮತ್ತು 6 ರವರು ಹೋಗಿದ್ದರು. ಸದರಿ ದಿನ ನಾನು ಆಂಬ್ಯುಲೆನ್ಸಗೆ ಕರೆ ಮಾಡಿ, ಚಾಸಾ 1 ರವರನ್ನು ದಾಖಲಿಸುವ ಕುರಿತು ಸುಳ್ಳು ನುಡಿದಿದ್ದೇನೆ ಎಂದರೆ ಸರಿ ಅಲ್ಲ.

5. ಸದರಿ ಕುರಿತು ನಾನು ಪೋಲಿಸರಿಗೆ ಘಟನೆಯಾದ 2-3 ದಿನ ಬಿಟ್ಟು ಗದಗನ ಆಸ್ಪತ್ರೆಯಲ್ಲಿ ಹೇಳಿಕೆ ನೀಡಿದ್ದೇನೆ ಅಂತಾ ನುಡಿಯುತ್ತಾರೆ. ಆ ಕಾಲಕ್ಕೆ ಚಾಸಾ 1, 4, 6 ಮತ್ತು ನಾನು ಇದ್ದೆನು. ಆರೋಪಿಯಿಂದ ಆಸ್ತಿಯನ್ನು ಪಡೆದುಕೊಳ್ಳಲು ನಾನು ಮತ್ತು ಚಾಸಾ 1 ರವರು ಈ ರೀತಿ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ಘಟನಾ ಸ್ಥಳದಲ್ಲಿ ಚಾಸಾ 1 ರವರ ಮೇಲೆ ಹಲ್ಲೆ ಮಾಡಿ, ಗಾಯ ಮಾಡಿದ್ದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಅಂಶಗಳು ಸುಳ್ಳು ಎಂದರೆ ಸರಿ ಅಲ್ಲ. ಆರೋಪಿತರಿಗೂ ಮತ್ತು ಮು.ಮಾ.ಗೂ ಯಾವುದೇ ಸಂಬಂಧ ಇರದೇ ಇದ್ದರೂ, ಆರೋಪಿತರು ಯಾವುದೇ ತಪ್ಪು ಎಸಗದೇ ಇದ್ದರೂ, ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಘಟನೆ ನಡೆದಾಗ, ಕತ್ತಲಿದ್ದುದ್ದರಿಂದ ಮು.ಮಾ.ಗಳನ್ನು ಗುರುತಿಸಲು ಆಗಲಿಲ್ಲ ಎಂದರೆ ಸರಿ ಅಲ್ಲ. ಮು.ಮಾ.ಗಳ ತರಹ ಸಾಕಷ್ಟು ವಸ್ತುಗಳು ಹೊರಗಡೆ ಸಿಗುತ್ತವೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಜೆಎಂಎಫ್‌ಸಿ ಮುಂಡರಗಿ.